# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

ಓ.ಎಸ್ ಸಂಖ್ಯೆ. **2933/2022** ಡಿ.ಡಬ್ಲೂ .1

ದಿನಾಂಕಃ 23-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ-

1 ನೇ ಪ್ರತಿವಾದಿ ನನ್ನ ತಂದೆ. ವಾದಿ ಮತ್ತು 3 ನೇ ಪ್ರತಿವಾದಿ ತಂಗಿಯರು. 4 ನೇ ಪ್ರತಿವಾದಿ ತಮ್ಮ. 5 ನೇ ಪ್ರತಿವಾದಿ ನನ್ನ ಹೆಂಡತಿ. ನಾನು 10 ನೇ ತರಗತಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ಬೇರೆಯವರು 5 ನೇ ತರಗತಿವರೆಗೆ ವಿಧ್ಯಾಭ್ಯಾಸ ಮಾಡಿರಬಹುದು. ಮನೆಯ ವ್ಯವಹಾರವನ್ನು ನಾನೇ ನೋಡಿಕೊಳ್ಳುತಿದ್ದೆ ಎಂದರೆ ಹೌದು.

2005-06 ರ ಸಾಲಿನಲ್ಲಿ ನಾನು ವೈರಿಂಗ್ ಮತ್ತು ಪ್ಲಮ್ಮಿಂಗ್ ಕೆಲಸವನ್ನು ಬೇರೆಯವರ ಜೊತೆ ಮಾಡುತ್ತಿದ್ದೆ. ಆ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ವಾದಿ ಮತ್ತು ನನ್ನ ತಂಗಿಯರು ಮನೆಯಲ್ಲೇ ಇದ್ದು, ನನ್ನ ತಮ್ಮ ಲಾರಿ ಚಾಲಕನಾಗಿ ಕೆಲಸ ಮಾಡುತ್ತಿದ್ದರು. ದಾವಾ ಆಸ್ತಿಯನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ಆಸ್ತಿಗಳು ಇಲ್ಲ ಎಂದರೆ ಹೌದು. ದಾವಾ ಆಸ್ತಿಯಲ್ಲಿ ರಾಗಿ ಬೆಳೆ ಬೆಳೆಯುತ್ತಿದ್ದೆ. ವರ್ಷಕ್ಕೆ ಸುಮಾರು 8 ಮೂಟೆ ರಾಗಿ ಬೆಳೆಯುತ್ತಿದ್ದೆ. ಅದನ್ನು ನಮ್ಮ ಆಹಾರಕ್ಕಾಗಿ ಉಪಯೋಗಿಸುತ್ತಿದ್ದೆ ಎಂದರೆ ಹೌದು. ದಾವಾ ಆಸ್ತಿಯಲ್ಲಿ ಆಧಾಯ ಬರುವಂತಹ ಬೆಳೆಯನ್ನು ಬೆಳೆಯುತ್ತಿರಲಿಲ್ಲ ಎಂದರೆ ಹೌದು. ನಾನು ನಿಡಿ. 2 ರಂತೆ ದಿನಾಂಕಃ- 24-05-206 ರಂದು ಆಸ್ತಿಯನ್ನು ಖರೀದಿಸುವಾಗ ಅದರ ಪ್ರತಿಫಲದಹಣವಾದ ರೂ. 3,12,500/- ಗಳನ್ನು ಎಲ್ಲಿಂದ ಹೊಂದಿಸಿದ್ದಿರಿ ಎಂದರೆ ನಮ್ಮ ಅತ್ತೆಯವರು ತಮ್ಮ ನಿವೇಶನವನ್ನು ಮಾರಾಟ ಮಾಡಿ ಬಂದ ಹಣವನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನನ್ನ ಪ್ರಮಾಣ ಪತ್ರ ಮತ್ತು ತಕರಾರಿನಲ್ಲಿ ಹೇಳಿಲ್ಲ ಎಂದರೆ ಹೌದು. ನನ್ನ ಅತ್ತೆ ಮಾರಾಟ ಮಾಡಿದ ನಿವೇಶನವನ್ನು ನೋಡಿದ್ದು, ಅದರ ನಂಬರ್ ಮತ್ತು ಚೆಕ್ಕುಬಂದಿ ಗೊತ್ತಿಲ್ಲ. ಸದರಿ ಆಸ್ತಿ ಎಷ್ಟು

ಹಣಕ್ಕೆ ಮಾರಾಟ ಆಗಿರುತ್ತದೆ ಎಂದು ಗೊತ್ತಿಲ್ಲ. ನಿಡಿ. 2 ರ ಕ್ರಯ ಪತ್ರ ತಯಾರಿಸಲು ನರಸಿಂಹಪ್ಪನವರೇ ಹೇಳಿ ಬರೆಸಿರುತ್ತಾರೆ. ಕ್ರಯ ಪತ್ರ ಬರೆಯುವ ಕಾಲಕ್ಕೆ ನರಸಿಂಹಪ್ಪನವರು ಚಿಕ್ಕಬಳ್ಳಾಪುರದಲ್ಲಿ ವಾಸ ಇದ್ದರು. ನಿಡಿ. 2 ರಲ್ಲಿ ನರಸಿಂಹಪ್ಪನವರ ವಿಳಾಸವನ್ನು ಗಣಗಳು ಗ್ರಾಮದಲ್ಲಿ ಎಂದು ತೋರಿಸಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನರಸಿಂಹಪ್ಪನವರಿಗೆ ಒಬ್ಬ ಗಂಡು ಮಗ ಮತ್ತು ಒಂದು ಹೆಣ್ಣು ಮಗಳು ಇದ್ದಾರೆ. ಅವರಲ್ಲಿ ಶ್ರೀನಿವಾಸ ಎಂಬುವವರ ಹೆಸರು ಗೊತ್ತು. ಕ್ರಯದ ಸಮಯದಲ್ಲಿ ನರಸಿಂಹಪ್ಪನವರ ಮಕ್ಕಳು ಬಂದಿರಲಿಲ್ಲ. ಆ ಸಮಯದಲ್ಲಿ ನಿಮ್ಮ ತಂದೆ ಕ್ರಯ ಪತ್ರ ಬರೆದುಕೊಡುತ್ತಿದ್ದಾರೆ ಎಂದು ನಾನು ಅವರಿಗೆ ತಿಳಿಸಿರುವುದಿಲ್ಲ.

ನರಸಿಂಹಪ್ಪನವರು ದಾವಾ ಆಸ್ತಿಯ ಮಾಲೀಖರು ಎಂಬುದರ ಬಗ್ಗೆ ಏನು ದಾಖಲೆ ಪರಿಶೀಲಿಸಿರುತ್ತೀರಾ ಎಂದರೆ ಯಾವ ದಾಖಲೆಯನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ಕ್ರಯ ಪತ್ರ ಬರೆಯುವ ಸಮಯದಲ್ಲಿ ಕ್ರಯ, ವಿಲ್ ಮತ್ತು ಇನ್ನಿತರೆ ದಾಖಲೆಗಳನ್ನು ಬರೆದ ಬಗ್ಗೆ ವಿಚಾರಿಸಿರುತ್ತೀರಾ ಎಂದರೆ ಇಲ್ಲ. ನರಸಿಂಹಪ್ಪನವರಿಂದ ವಿಲ್ ಆಗಿರುವ ಬಗ್ಗೆ ನಮ್ಮ ತಾಯಿ ನನಗೆ ಹೇಳಿರುವುದಿಲ್ಲ. ಸದರಿ ವಿಲ್ ಬಗ್ಗೆ ಮನೆಯಲ್ಲಿ ದಾಖಲೆ ಪರಿಶೀಲಿಸಿರುತ್ತೀರಾ ಎಂದರೆ ನನಗೆ ಗೊತ್ತಿಲ್ಲ.

ನನಗೆ ಕ್ರಯ ಪತ್ರ ಬರೆಯುವ ಮೊದಲೇ ದಿನಾಂಕಃ 26-07-1997 ರಂದು ನರಸಿಂಹಪ್ಪನವರು ನನ್ನ ತಾಯಿಗೆ ವಿಲ್ ಮೂಲಕ ದಾವಾ ಆಸ್ತಿಯನ್ನು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ನಾನು ಕ್ರಯದ ಹಣವನ್ನು ನರಸಿಂಹಪ್ಪನವರ ಕೈಗೆ ನೀಡಿರುತ್ತೇನೆ. ಕ್ರಯ ಪತ್ರ ಬರೆಯವ ಕಾಲಕ್ಕೆ ನರಸಿಂಹಪ್ಪನವರಿಗೆ ಸುಮಾರು 70-75 ವರ್ಷ ವಯಸ್ಸು ಆಗಿರಬಹುದು. ನರಸಿಂಹಪ್ಪನವರು ಇನ್ನೊಬ್ಬರ ಸಹಾಯವಿಲ್ಲದೆ ನಡೆಯಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಡಿ. 2 ರ ಕ್ರಯ ಪತ್ರಕ್ಕೆ ನಾನು, ನನ್ನ ಹೆಂಡತಿ ಮತ್ತು ತಾಯಿ ಹಾಗೂ ನರಸಿಂಹಪ್ಪನವರು ಒಟ್ಟಿಗೆ ಸಹಿ ಮಾಡಿ, ಹೆಬ್ಬಟ್ಟಿನ ಗುರುತು ಹಾಕಿರುತ್ತೇವೆ. ನಾವು 3 ಜನರ ಹೆಬ್ಬಟ್ಟಿನ ಗುರುತುಗಳು ಸ್ಪಷ್ಟವಾಗಿ ಕಾಣುತ್ತಿದ್ದು, ನರಸಿಂಹಪ್ಪನವರ ಹೆಬ್ಬಟ್ಟಿನ ಗುರುತು ಸರಿಯಾಗಿ ಕಾಣಬಾರದು ಎಂದು ಉದ್ದೇಶ ಪೂರ್ವಕವಾಗಿ ಕಾಣದಂತೆ ಹಾಕಿಸಿರುತ್ತೀರಾ ಎಂದರೆ

ಸುಳ್ಳು. ನಿಡಿ. 2 ರ ಅಸಲು ಪ್ರತಿ ಬ್ಯಾಂಕಿನಲ್ಲಿದೆ. ನಿಡಿ. 2 ರ ಪ್ರತಿ ಪುಟಗಳಲ್ಲಿ ನರಸಿಂಹಪ್ಪನವರು ಮಾತ್ರ ಸಹಿ ಮಾಡಿದ್ದು ನಾವು 3 ಜನ ಸಹಿ ಮಾಡಿಲ್ಲ ಎಂದರೆ ಗೊತ್ತಿಲ್ಲ.

ನನ್ನ ತಾಯಿ ಲಲಿತಮ್ಮ ವಿಧ್ಯಾಭ್ಯಾಸ ಮಾಡಿಲ್ಲ. ಅವರು ಹೆಬ್ಬಟ್ಟಿನ ಗುರುತು ಮತ್ತು ಸಹಿ ಮಾಡುತ್ತಿದ್ದರು. ನಿಡಿ. 2 ರ 2 ಮತ್ತು 7 ನೇ ಪುಟಗಳಲ್ಲಿರುವ ಲಲಿತಮ್ಮನವರ ಸಹಿ ಬೇರೆ ಬೇರೆ ಇದೆ ಎಂದರೆ ಸರಿಯಲ್ಲ. ಸಹಿಗಳಲ್ಲಿ ವ್ಯತ್ಯಾಸ ಇದೆ. ಸಾಕ್ಷಿ ಪುನಃ ವ್ಯತ್ಯಾಸ ಇಲ್ಲ ಎಂದು ನುಡಿಯುತ್ತಾರೆ.

ನಿಡಿ. 3 ರಲ್ಲಿರುವ ನನ್ನ ತಾಯಿಯ ಸಹಿಯಲ್ಲಿ ವ್ಯತ್ಯಾಸ ಇದೆ ಎಂದರೆ ಸಾಕ್ಷಿ ಅವರು ಅದೇ ರೀತಿ ಸಹಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಿಡಿ. 2 ಮತ್ತು 3 ರಲ್ಲಿನ ಲಲಿತಮ್ಮನವರ ಸಹಿಗಳನ್ನು ನಾನು ಪೋರ್ಜರಿ ಮಾಡಿರುತ್ತೇನೆ ಎಂದರೆ ಸುಳ್ಳು. ನಿಡಿ. 2 ರ ಕ್ರಯ ಪತರದಲ್ಲಿ ನರಸಿಂಹಪ್ಪನವರಿಗೆ ದಾವಾ ಆಸ್ತಿ ಹೇಗೆ ಬಂದಿರುತ್ತದೆ ಎಂಬುದರ ಬಗ್ಗೆ ವಿವರಣೆ ನೀಡಿರುವುದಿಲ್ಲ ಎಂದರೆ ಗೊತ್ತಿಲ್ಲ.

ನಿಡಿ. 2 ರ ಕ್ರಯ ಪತ್ರ ಆಗುವ ಮೊದಲು ದಾವಾ ಆಸ್ತಿಯನ್ನು ನರಸಿಂಹಪ್ಪನವರುನಿಡಿ. 1 ರಂತೆ ಖರೀದಿಸಿರುವ ಬಗ್ಗೆ ಗೊತ್ತಿತ್ತೇ ಎಂದರೆ ಸಾಕ್ಷಿ ನನ್ನ ತಾಯಿಯವರಿಗೆ ಗೊತ್ತಿತ್ತು ಎಂದು ನುಡಿಯುತ್ತಾರೆ. ನಿಡಿ. 1 ನ್ನು ತಾಲ್ಲೂಕು ಕಛೇರಿಯಿಂದ ಪಡೆದಿರುತ್ತೇನೆ. ಅದನ್ನು ನಾನು ಓದಿ ತಿಳಿದುಕೊಂಡಿಲ್ಲ. ನಿಡಿ. 1 ಮತ್ತು 2 ರಲ್ಲಿನ ಕ್ರಯ ಪತ್ರಗಳಲ್ಲಿನ ಚೆಕ್ಕುಬಂದಿಗಳಲ್ಲಿ ಹೊಂದಾಣಿಕೆ ಇಲ್ಲ ಎಂದರೆ ಗೊತ್ತಿಲ್ಲ. ನಿಡಿ. 1 ರ ಚೆಕ್ಕು ಬಂದಿ ಮತ್ತು ನಿಪಿ. 1 ರ ವಿಲ್ ಪತ್ರದ ಚೆಕ್ಕುಬಂದಿಯಲ್ಲಿ ಹೊಂದಾಣಿಕೆ ಇದೆ ಎಂದರೆ ಗೊತ್ತಿಲ್ಲ. ನಿಡಿ. 2 ರ ಕ್ರಯ ಪತ್ರಕ್ಕೆ ನರಸಿಂಹಪ್ಪನವರೆ ಮಾಹಿತಿ ನೀಡಿದ್ದಲ್ಲಿ ಸರಿಯಾದ ಚೆಕ್ಕುಬಂದಿಯನ್ನು ನೀಡುತ್ತಿದ್ದರು ಎಂದರೆ ಗೊತ್ತಿಲ್ಲ. ನರಸಿಂಹಪ್ಪನವರು ಬರದೆ ಇದ್ದರು ಸಹ ನಿಡಿ. 2 ರ ಕ್ರಯ ಪತ್ರವನ್ನು ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸುಳ್ಳು.

ನರಸಿಂಹಪ್ಪನವರು ನನ್ನ ತಾಯಿ ಲಲಿತಮ್ಮವನರ ತಂಗಿಯಾದ ಲಕ್ಷ್ಮಮ್ಮನವರ ಗಂಡ. ನರಸಿಂಹಪ್ಪನವರನ್ನು ನಾನು ಹುಟ್ಟಿದ್ಧಂದಿನಿಂದಲೂ ನೋಡಿದ್ದೇನೆ. ಈಗ ನೋಡುತ್ತಿರು ಫೋಟೊದಲ್ಲಿರುವ ವ್ಯಕ್ತಿ ನರಸಿಂಹಪ್ಪನವರು ಎಂದರೆ ಹೌದು. ಸದರಿ ಫೋಟೊವನ್ನು ಸಾಕ್ಷಿ ಗುರುತಿಸಿದ

ಕಾರಣ ಅದನ್ನು ನಿಪಿ. 13 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಫೋಟೊ ತೋರಿಸಿ ಅದರಲ್ಲಿರುವ ವ್ಯಕ್ತಿ ನರಸಿಂಹಪ್ಪ ಅಲ್ಲ ಎಂದರೆ ಸಾಕ್ಷಿ ಅದು ಅವರು ವಯಸ್ಸಾದಾಗ ತೆಗೆದ ಫೋಟೋ ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು ನಿಪಿ. 14 ಎಂದು ಗುರುತಿಸಲಾಯಿತು. ನಿಡಿ. 2 ರ ಕ್ರಯ ಪತ್ರದಲ್ಲಿರುವ ನರಸಿಂಹಪ್ಪನವರದ್ದು ಎನ್ನಲಾದ ಹೆಬ್ಬೆಟ್ಟಿನ ಗುರುತು ಮತ್ತು ವಿಲ್ ನಲ್ಲಿ ಇರುವ ಹೆಬ್ಬೆಟ್ಟಿನ ಗುರುತಿನಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಆಹಾದಲ್ಲಿ ಸದರಿವಿಲ್ ನ್ನು ನೋಡಿರುತ್ತೀರಾ ಎಂದರೆ ಸಾಕ್ಷಿ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಯಾವ ಆಧಾರದ ಮೇಲೆ ಹೆಬ್ಬೆಟ್ಟಿನ ಗುರುತಿನಲ್ಲಿ ವ್ಯತ್ಯಾಸ ಇದೆ ಎಂದು ಹೇಳುತ್ತೀರಾ ಎಂದರೆ ಸದರಿ ವಿಚಾರದ ಬಗ್ಗೆ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಹೆಬ್ಬೆಟ್ಟಿನ ಗುರುತಿನಲ್ಲಿ ವ್ಯತ್ಯಾಸದ ಬಗ್ಗೆ ಹಾಗೂ ನನ್ನ ತಾಯಿ ಸಹಿಗಳ ಬಗ್ಗೆ ವಿಧಿ ವಿಜ್ಞಾನದ ಮೂಲಕ ಪರೀಕ್ಷೆಗೆ ಒಳಪಡಿಸಲು ನನ್ನ ತಕರಾರು ಇಲ್ಲ. ನರಸಿಂಹಪ್ಪನವರ ಮಗ ಬದುಕಿದ್ದಾರೆ, ಅವರು ಮೂಲಕ ಫೋಟೊಗಳನ್ನು ಗುರುತಿಸಲು ನನ್ನ ತಕರಾರು ಇಲ್ಲ. ನಿಡಿ. 2 ರ ಕ್ರಯ ಪತ್ರದ ಪ್ರ 2 ಫಲಕ್ಕೆ ನನ್ನ ತಾಯಿ ಸುಮಾರು ರೂ. 5,000/- ಹಣ ನೀಡಿರಬಹುದು. ನಿಡಿ. 2 ರ ಕ್ರಯ ಪತ್ರ ಆದ ಬಗ್ಗೆ ನನ್ನ ತಂದೆ 1 ನೇ ಪ್ರತಿವಾದಿಗೆ ಗೊತ್ತು. ವಾದಿ ಮತ್ತು ಉಳಿದ ಪ್ರತಿವಾದಿಗಳು ಆ ಸಮಯದಲ್ಲಿ ಗ್ರಾಮದಲ್ಲಿ ಇರಲಿಲ್ಲ, ನಂತರ ಗೊತ್ತಾಗಿರುತ್ತದೆ.

ದಾವಾ ಆಸ್ತಿ ವಿಲ್ ಮೂಲಕ ಬಂದಿರುವುದರಿಂದ ಅದರಲ್ಲಿ ವಾದಿ ಮತ್ತು ಉಳಿದ ಪ್ರತಿವಾದಿಗಳಿಗೆ ತಲಾ 1/5 ನೇ ಹಿಸ್ಸಾ ಹಕ್ಕು ಬರಬೇಕು ಎಂದರೆ ಸುಳ್ಳು. ವಾದಿ- ಪ್ರತಿವಾದಿಗಳು ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಭಾಗವನ್ನು ಕೇಳಿದಾಗ ನಾವುಗಳು ಒಂದು ವಿಭಾಗ ಪತ್ರವನ್ನು ದಿನಾಂಕಃ 04-01-2021 ರಲ್ಲಿ ಬರೆದುಕೊಂಡು ಅದರಲ್ಲಿ 2 ಮತ್ತು 5 ನೇ ಪ್ರತಿವಾದಿಗಳಿಗೆ 30 ಗುಂಟೆ. 4 ನೇ ಪ್ರತಿವಾದಿಗೆ 14 ಗುಂಟೆ ಮತ್ತು ಉಳಿದವರಿಗೆ ತಲಾ ರೂ. 5 ಲಕ್ಷ ಹಣ ನೀಡುವ ಬಗ್ಗೆ ಬರವಣಿಗೆ ಆಗಿದ್ದು, ಅದಕ್ಕೆ ನಾನು ಒಪ್ಪಿರಲಿಲ್ಲಿ ಎಂದರೆ ಸುಳ್ಳು. ಅದೇ ರೀತಿ ದಿನಾಂಕಃ 08-12-2021 ರಂದು ಪಂಚಾಯಿತಿ ದಾರರ ಸಮಕ್ಷಮ ಮತ್ತೊಂದು ವಿಭಾಗ ಪತ್ರ ಬರೆದುಕೊಂಡು 2 ಮತ್ತು 5 ನೇ ಪ್ರತಿವಾದಿಗಳಿಗೆ 30 ಗುಂಟೆ. 4

ನೇ ಪ್ರತಿವಾದಿಗೆ 14 ಗುಂಟೆ ಮತ್ತು ಉಳಿದವರಿಗೆ ತಲಾ 2 ಗುಂಟೆ ನೀಡುವ ಬಗ್ಗೆ ಬರವಣಿಗೆ ಆಗಿದ್ದು ನಾನು ಒಪ್ಪಿರುವುದಿಲ್ಲ ಎಂದರೆ ಸುಳ್ಳು. ನಾನು ಸದರಿ ದಾಖಲೆಗಳಿಗೆ ಒಪ್ಪಿಗೆ ಸೂಚಿಸದೆ ಎಲ್ಲಾ ಆಸ್ತಿ ನನ್ನದೆ ಎಂದು ಹೇಳಿರುತ್ತೇನೆ ಎಂದರೆ ಸುಳ್ಳು. ವಾದಿ ಮತ್ತು ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಸಮಭಾಗವನ್ನು ನೀಡುವಂತೆ ಕೇಳಿದಾಗ ನಾನು ನಿರಾಕರಿಸಿದ ಕಾರಣ ಈ ದಾವೆಯಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸುಳ್ಳು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಅದರಲ್ಲಿನ ಸಹಿಯನ್ನು ಗುರುತಿಸಿದ ಕಾರಣ ಅದನ್ನು ನಿಪಿ. 15 ಮತ್ತು ಸಾಕ್ಷ್ಯಸಹಿಯನ್ನು ನಿಪಿ. 15 (ಎ) ಎಂದು ಗುರುತಿಸಲಾಯಿತು. ನಿಪಿ. 15 ರಲ್ಲಿ ಒಟ್ಟು ಕುಟುಂಬದ ಆಸ್ತಿ ಎಂದು ಬರೆದಿದೆ ಎಂದರೆ ಸಾಕ್ಷಿ ಆ ರೀತಿ ಆವರು ಬರೆಸಿಕೊಂಡಿದ್ದು, ಅದು ಒಟ್ಟು ಕುಟುಂಬದ ಆಸ್ತಿ ಅಲ್ಲ ಎಂದು ನುಡಿಯುತ್ತಾರೆ. ನಿಪಿ. 15 ರ ದಾಖಲೆಯನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿಲ್ಲ. ಸದರಿ ದಾಖಲೆಗೆ ನನ್ನ ತಮ್ಮ ನನ್ನ ಮತ್ತು ನನ್ನ ಹೆಂಡತಿಯ ಸಹಿ ಪಡೆದಿರಬಹುದು.

ಮುಂದೂವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.